**ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂ. 307/2023

ಪ್ರಾಸಾ : 06

ಚಾಸಾ : 07

| | | |
|---|---|---|
| ಹೆಸರು | : | ಗೀರಿಜ ಪಿ |
| ಗಂಡನ ಹೆಸರು | : | ಕಾಶೀನಾಥ್ |
| ಪ್ರಾಯ | : | 57 ವರ್ಷ |
| ಉದ್ಯೋಗ | : | ಪಿಡಿಓ |
| ವಾಸಸ್ಥಳ | : | ಮಾಣಿ ಗ್ರಾಮ ಪಂಚಾಯತ್ ಬಂಟ್ವಾಳ ತಾಲೂಕು |

ದಿಃ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಮಾಣಿ ಗ್ರಾಮ ಪಂಚಾಯತ್ನಲ್ಲಿ 18.08.2021 ರಿಂದ ಇಲ್ಲಿಯವರೆಗೂ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ವಿಟ್ಲ ಠಾಣಾಧಿಕಾರಿಯವರು ಕೇಶವ ಗೌಡ ಬಿನ್ ವೆಂಕಪ್ಪ ಗೌಡ ಗೋಳಿಕಟ್ಟೆ ಮನೆ ಅನಂತಾಡಿ ಗ್ರಾಮ ರವರ ಉದ್ಯಮ ಪರವಾನಿಗೆ ಕುರಿತು ದೃಡಪತ್ರ ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿದ ಮೇರೆಗೆ ಗ್ರಾಮ ಪಂಚಾಯತ್ ದಾಖಲೆಗಳ ಪ್ರಕಾರ 17 ವರ್ಷಗಳಿಂದ ಅಂದರೆ 2005-06 ನೇ ಸಾಲಿನಿಂದ ಪರವಾನಿಗೆಯನ್ನು ಹೊಂದಿ ವಿದ್ಯುತ್ ಸಂಪರ್ಕ ಪಡೆದುಕೊಂಡು ಸಂಚಾರ ಗೂಡಂಗಡಿ ಯಲ್ಲಿ ಕ್ಯಾಂಟೀನ್ ಉದ್ಯಮ ನಡೆಸುತ್ತಿರುತ್ತಾರೆ ಎಂದು ದೃಡಪತ್ರವನ್ನು ದಿ. 16.06.2022 ರಂದು ನೀಡಿರುತ್ತೇನೆ. ದೃಡಪತ್ರವನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಸಿ ಎಂ ವಕೀಲರಿಂದಃ</u>

3. ಯಾವ ದಿನಾಕದಂದು ಕೋರಿಕೆ ಪತ್ರವನ್ನು ಕಚೇರಿಗೆ ತಂದು ಕೊಟ್ಟಿರುತ್ತಾರೆ ಎಂದು ಈಗ ನೆನಪಿಲ್ಲ. ಕೋರಿಕೆ ಪತ್ರ ಬಂದ ಎಷ್ಟು ದಿವಸಗಳ ನಂತರ ದೃಡಪತ್ರ ನೀಡಿರುತ್ತೇನೆ ಎಂದು ಈಗ ಹೇಳಲು ಆಗುವುದಿಲ್ಲ. ನಿಪಿ-12 ದೃಡಪತ್ರದಲ್ಲಿ ಕೋರಿಕೆ ಪತ್ರದ ಉಲ್ಲೇಖ ಸಂಖ್ಯೆ ನಮೂದಿಸಿರುವುದಿಲ್ಲ. ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯ 40 ಮೀಟರ್ ಅಂತರದಲ್ಲಿ ಸಂಚಾರಿ ಗೂಡಂಗಡಿ ನಡೆಸುತ್ತಿದ್ದಾರೆ. ಸಂಚಾರಿ ಗೂಡಂಗಡಿ ನಡೆಸುತ್ತಿದ್ದ ಸ್ಥಳಕ್ಕೆ ನಾನು ಭೇಟಿ ಕೊಟ್ಟಿರುವುದಿಲ್ಲ. ಸಂಚಾರಿ ಗೂಡಂಗಡಿ ಎಂದರೆ ಆಗಾಗ ಬೇರೆ ಬೇರೆ ಸ್ಥಳಗಳಿಗೆ ಬದಲಾಯಿಸಿಕೊಂಡು ಹೋಗುವಂತಹದು ಎಂದರೆ ಸರಿ . ಸಂಚಾರಿ ಗೂಡಂಗಡಿ ಇರುವ ಸ್ಥಳ ರಾಷ್ಟ್ರೀಯ ಹೆದ್ದಾರಿಯ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಗೂಡಂಗಡಿಗೆ ಸಂಬಂಧಿಸಿದಂತೆ ಪರವಾನಿಗೆಯನ್ನು ಕಳೆದ ವರ್ಷ ಕೇಶವ ಗೌಡ ರವರು ನವೀಕರಣ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

4. ಉದ್ಯಮ ಪರವಾನಿಗೆ ನೀಡಲು, ವಿದ್ಯುತ್ ಸಂಪರ್ಕ ಪಡೆಯಲು ನಮ್ಮ ಪಂಚಾಯತ್ ನಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಮಾನದಂಡಗಳು ಇವೆ ಎಂದರೆ ಸರಿ . ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರ ಕೋರಿ ಮತ್ತು ಪರವಾನಿಗೆಯನ್ನು ಹೊಂದಲು ಮಾನದಂಡ ಅಪೇಕ್ಷಿಸುವ ದಾಖಲೆಗಳನ್ನು ಕೇಶವ ಗೌಡರವರು ನೀಡಿರುವುದಿಲ್ಲ. ಗೂಡಂಗಡಿಗೆ ಯಾವುದೇ ಕದ ನಂಬ್ರ ಪಂಚಾಯತ್ ನಿಂದ ನೀಡಿರುವುದಿಲ್ಲ. ಸಾಮಾನ್ಯವಾಗಿ ವಿದ್ಯುತ್ ಸಂಪರ್ಕ ಪಡೆಯಲು ಕದ ನಂಬ್ರ ಅತ್ಯವಶ್ಯಕ ಎಂದರೆ ಸರಿ . ಗೂಡಂಗಡಿಗೆ ಕೇಶವ ಗೌಡ ರವರು ಪಂಚಾಯತಿಗೆ ಯಾವುದೇ ದೂರು ನೀಡಿರುವುದಿಲ್ಲ. ಕೋರಿಕೆ ಪತ್ರ ಸ್ವೀಕರಿಸಿದ ನಂತರ ನಾನು ಸ್ಥಳಕ್ಕೆ ಭೇಟಿ ಕೊಟ್ಟಿರುವುದಿಲ್ಲ. 2020 ರಿಂದ 2022 ನೇ ವರೆಗಿನ

ಕೇಶವ ಗೌಡರವರಿಗೆ ನೀಡಲಾದ ಉದ್ಯಮ ಪರವಾನಿಗೆ ಪ್ರತಿಯನ್ನು ದೃಡಪತ್ರದೊಂದಿಗೆ ನೀಡಿರುವುದಿಲ್ಲ. 17 ವರ್ಷದ ದಾಖಲೆಯನ್ನು ಪರಿಶೀಲಿಸಿ ಪೋಲಿಸರಿಗೆ ನೀಡಿರುವುದಿಲ್ಲ. ನಾನು ಚಾಸಾ-11 ರವರ ಕೋರಿಕೆಯ ಮೇರೆಗೆ ಚಾಸಾ-1 ರವರಿಗೆ ಸಹಾಯ ಮಾಡಲು ನಿಪಿ-12 ದೃಡಪತ್ರವನ್ನು ಸುಳ್ಳಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ತಕ್ಷೀರು ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಚಾಸಾ-1 ರವರಿಗೆ ಸೇರಿದ ಯಾವುದೇ ಗೂಡಂಗಡಿ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸತ್ಯಕ್ಕೆ ದೂರವಾದವು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ